ಕವಿತೆ



ಪ್ರತಿಭಾ ಹೆಗಡೆ
ಕಲೆ: ಜಯವಂತ ಶೆಟ್ಟಿಗಾರ್

# ಸಾಗರದ ಅಭಿಸಾರಿಕೆ



ಅರ್ಧ ಓದಿ ಮಡಚಿಟ್ಟ ಪುಸ್ತಕವೊಂದು
ಇಂದೇಕೋ ಕೈಗೆ ಎಡತಾಕುತ್ತಿದೆ
ಸುಮ್ಮನೆ ಸಮಾಧಾನಕ್ಕೆಂದು ಪುಟ ತೆರೆದರೆ
ಮುಗ್ಗಲಾದ ಘಮವಡರುತ್ತದೆ

ಅದೆಷ್ಟು ಕನಸುಗಳ, ಆಸೆಗಳ
ಸುಮ್ಮನೆ ಕೈ ಮೈಗಳಿಗೆ ಅಂಟಿಕೊಂಡಂತಿದ್ದ
ಖುಷಿಯ ಆಟಗಳ
ಮಡಚಿ ಮೂಲೆಗೆಸೆದಾಗಿದೆ
ಹುಡುಕಬೇಕಿನ್ನು
ಒಂದೊಂದನ್ನೇ ಎತ್ತಿ ದೂಳ ಕೊಡವಿ
ಎದೆಗೊತ್ತಿಕೊಳ್ಳಬೇಕು

ಮೆಲ್ಲಗೆ ಎದ್ದು ನಿಂತವಳ ಕಾಲು
ಕಟಕಟಿಸಬಹುದು
ಎದೆಯ ಭಾವಗಳ ಮರಳಿ
ಸ್ಪರ್ಶಿಸುವಾಗ
ಕೈ ನಡುಗಬಹುದು
ಮಂಜಾಗಬಹುದು ಕಣ್ಣುಗಳು

ನನ್ನದೇ ಚೂರುಗಳ
ಇನ್ನೊಮ್ಮೆ ಒಟ್ಟಾಗಿಸುವಾಗ
ಮತ್ತೆ ಚದುರುವ ಭೀತಿ ಕಾಡಬಹುದು
ಆದರೂ ಹೊರಡಬೇಕು

ಹೊರಳಿ ಹರಿಯುವ ತೊರೆಯು
ದೂ...ರ ಸಾಗರಕೆ ಅಭಿಸಾರಿಕೆ....